

ತಂದು ಮನಿ ಹೊರಗ ಇಟ್ವಿ. ಮರಿಗಳು ಒಂದಷ್ಟು ಬೆಳೆದ್ದಿದ್ದವು. ಸಿಕ್ಕಾಪಟ್ಟೆ ಚೀರಾಡಕ್ಕೆ ಶುರುಮಾಡಿದ್ವು. ಈ ದನಿ ಗಟ್ಟಿ ಶತ್ರು ಪಕ್ಷಿಗಳಿಗೆ ಕೇಳೊ ಹಂಗಿಲ್ರಿ. ಜಾಸ್ತಿ ವದರಾಡಬ್ಯಾಡ್ರಿ ಅಂತ ಅವುಕ್ಕೆ ನಾವೂ ಬುದ್ಧಿ ಹೇಳಂಗಿಲ್ಲ. ಇದು ಭಾಳಾ ಫಜೀತಿ ಆಗೋತ್ರಿ. ಆಶ್ಚರ್ಯ ಅಂದ್ರೆ ಇದೇ ನೋಡ್ರಿ! ತಾಯಿ ಸೂರಕ್ಕಿ ಮಕ್ಕಳ ಹುಡುಕಿಕೊಂಡು ಬಂದು ನಾವಿಟ್ಟರೋ ಜಾಗದಲ್ಲೇ ಗುಟುಕು ಕೊಟ್ಟು ಹೋಗೋಕೆ ಶುರು ಮಾಡ್ತು. ಇದನ್ನ ನಾವು ನಿರೀಕ್ಷೇನೆ ಮಾಡಿರಲಿಲ್ಲ. ನಾಲ್ಕೈದು ದಿನ ಅಲ್ಲೇ ಮಕ್ಕಳ ಪಾಲನೆ ಮಾಡಿ ಒಂದು ದಿನ ಸಂತೋಷದಿಂದ ಅವನ್ನು ಕರ್ಕೊಂಡು ಹೋಯಿತು. ಈ ಅಚ್ಚರಿಗಿಂತ ಮತ್ತೇನು ಬೇಕ್ರಿ ಜೀವನಾದಾಗೆ'

'ಧಾರವಾಡದ ಸೆಂಟ್ರಲ್ ಜೈಲಿನ ಕೈದಿಗಳ ಕಡೀಂದ ಗುಬ್ಬಿಗೂಡು ಮಾಡಿಸಿ ಎಲ್ಲರಿಗೂ ಹಂಚೋದು ಇನ್ನೂ ಚಾಲ್ತೀನಿ ಇಟ್ಕೊಂಡಿದೀನ್ರಿ. ತಮ್ಮ ಬದುಕು ಕಳಕೊಂಡು ಬಂಧಿಯಾದ ಜನ ಹಕ್ಕಿ ಬದುಕಿಗೆ ಗೂಡು ಕಟ್ಟೋದು ಎಷ್ಟು ಚೆಂದ ನೋಡ್ರಿ. ನನ್ನ ಮಗನ ಮದುವೆಯಲ್ಲಿ ಬಂದ ಅತಿಥಿಗಳಿಗೆ ಈ ಗುಬ್ಬಿ ಗೂಡೇ ಕಾಣಿಕೆಯಾಗಿ ಕೊಟ್ವಿ. ಲೆಫ್ಟಿನೆಂಟ್ ಜನರಲ್ ಆಗಿದ್ದ ಎಸ್.ಸಿ. ಸರದೇಶ ಪಾಂಡೆ, ಡಾ.ಎಂ.ಎಂ. ಕಲಬುರ್ಗಿ, ಸರಜೂ ಕಾಟ್ಕರ್ ಇವರೆಲ್ಲಾ ಈ ಗುಬ್ಬಿಗೂಡು ಪಡೆದ ಗಣ್ಯರು. ಬೇಷ್, ಚಲೋ ಕೆಲ್ಸ ಮಾಡೀಯಪ್ಪ. ಎಂಥ ಉದಾತ್ತ ಆಲೋಚನೆ ನಿಂದು ಎಂದು ಕಲ್ಬುರ್ಗಿ ಸರ್ ಬೆನ್ನು ತಟ್ಟಿದ್ದರು'

'ನಮ್ ಕಡೆ ಮಾವಿನ ಹೂವಿಗೆ ಮನೋ ಕ್ರೋಟೋಫಾಸ್ ಅನ್ನೋ ವಿಷ ಹೊಡಿಯೋ ರಿವಾಜಿದೇರಿ. ಆಗೇನಾತಂದ್ರೆ ಈ ಬುಲ್ ಬುಲ್ ಹಕ್ಕಿಗಳು ಈ ವಿಷದ ಸಂಪರ್ಕಕ್ಕೆ ಬಂದು ಬಿಟ್ವು. ಹುಳ ಹಿಡಿದು ತಿನ್ನೋಕೆ ಮಾವಿನ ಹೂವಿಗೆ ಹೋಗಿದ್ದೆ ಆಗಬರ್ಲಿಲ್ರಿ. ಎಲ್ಲಾ ನಿತ್ರಾಣ ಆಗಿ ಜೀವ ಬಿಡೋ ಸ್ಥಿತಿ ಬಂದೋದವು. ನನ್ನ ಶಿಷ್ಯರು ಇವನ್ನು ಹೆಕ್ಕಿ ತಂದರು. ಹೋಮಿಯೋಪಥಿ ಔಷಧಿ ಕೊಂಚ ತಿಳಿದ ನಾನು ಒಂದು ಪ್ರಯೋಗ ಮಾಡಿದೆ. ಆಗ ನನ್ನ ಅರಿವಿಗೆ ಹೊಳೆದಿದ್ದು ಅಷ್ಟೆನೆ. ಆರ್ಸ್ ಅಲ್ಬಮ್ ಎಂಬ ಗುಳಿಗೆ ತರಿಸಿ ಎಲ್ಲವುದಕ್ಕೂ ನುಂಗಿಸಿ ನೋಡಿದೆ. ಅಚ್ಚರಿ ಅಂದ್ರ ಕೆಲವು ರಿಕವರಿ ಆಗಿ ಹಾರಿ ಹೋದವು. ಮತ್ತೆ ಕೆಲವು ಉಳಿಲೇ ಇಲ್ಲ. ಪಾಪ ಸತ್ತೇ ಹೋದವು. ಆಗ ನಮ್ಮ ಹುಡುಗರು ಡಯಾಬೆಟಿಕ್ ಪೇಷಂಟುಗಳ ಹತ್ರ ಖಾಲಿ ಉಳಿದ ಸಿರಂಜುಗಳ ಹುಡುಕಿ ತಂದರು. ಅಷ್ಟೋ ಇಷ್ಟೋ ಉಸಿರಾಡುತ್ತಿದ್ದ ಹಕ್ಕಿಗಳಿಗೆ ಜೇನುತುಪ್ಪ ನೀರಲ್ಲಿ ಕದಡಿ ಅದನ್ನು ಸಿರಿಂಜಿನ ಮೂಲಕ ಕೆಲ ಹಕ್ಕಿಗಳಿಗೆ ಉಣಿಸಿದೆವು. ದೇವರು ದೊಡ್ಡೋನು ಅವು ಕೂಡ ಬದುಕಿದವು. ಹೀಂಗ ನಮಗ ತಿಳಿದ ಏನೇನೋ ಹೊಸ ವಿದ್ಯೆ ಪ್ರಯೋಗ ಮಾಡಿ ಹಕ್ಕಿಗಳ ಜೀವ ಉಳಿಸಲು ಹುಚ್ಚು ಸಾಹಸ ಮಾಡಿದೆವು. ನಮ್ಮ ಹುಡುಗರು ಹಿಂಗ ಕಲಿತಿದ್ದೇ ಜಾಸ್ತಿ ನೋಡ್ರಿ'.

'ಇತ್ತೀಚಿಗೆ ಹೊಲಗಳಿಗೆ ಹೊಡೆಯುವ ಔಷಧಿ ಕೂಡ ಜೀವಘಾತುಕ ಆಗ್ಯಾದ. ಔಷಧಿ ಹೊಡೆದ ಹೊಲದಲ್ಲಿ ಸತ್ತ ಹುಳಗಳ ಆಯ್ದು ತಿನ್ನಲು ನವಿಲುಗಳೇ ಜಾಸ್ತಿ ಬರೋದು. ವಿಷದ ಹುಳ ತಿಂದು ಒದ್ದಾಡುವ ನವಿಲುಗಳ ನಮ್ಮ ಹುಡುಗರೂ ತಿಳಿದ ಕೆಲ ಊರ ಜನರೂ ನನ್ನ ಹತ್ರ ತರೋಕೆ ಶುರು ಮಾಡಿದ್ರು. ಮೇಷ್ಟ್ರಾಗಿದ್ದ ನಾನು ನನಗಾ ತಿಳಿದಂಗೆ ಹಕ್ಕಿ ವೈದ್ಯನೂ ಆಗಿ ಹೋದೆ. ಅವನ್ನೂ ವಾಸಿ ಮಾಡುವ ಮಾರ್ಗ ಹುಡುಕಿಕೊಂಡೆ. ಅದಕ್ಕಾಗಿ ಅನೇಕ ಪುಸ್ತಕ ಓದಿದೆ.